**ಮುಖ್ಯ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಹಾವೇರಿ.**

**ಸಿ.ಸಿ.ನಂ.40/2017**

| | | | |
|---|---|---|---|
| ಸಾಕ್ಷಿದಾರರ ಹೆಸರು | ಶಿವಪ್ಪ ಸಾಗರ | ಸಿಡಬ್ಲ್ಯೂ | 11 |
| ತಂದೆಯ ಹೆಸರು | ದುರ್ಗಪ್ಪ | ಪಿಡಬ್ಲ್ಯೂ | 6 |
| ವಯಸ್ಸು | 56 ವರ್ಷ | | |
| ಉದ್ಯೋಗ | ಪಿ.ಎಸ್.ಐ, ಕಾಗಿನೆಲೆ ಪೊಲೀಸ ಠಾಣೆ | | |
| ವಾಸಸ್ಥಳ | ಕಾಗಿನಲೆ | | |

**ದಿಃ06.03.2026 ರಂದು ಸಾಕ್ಷಿದಾರರಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಹಿ.ಸ.ಸ.ಅಭಿಯೋಜಕರಿಂದ.**

1) ನಾನು ದಿನಾಂಕಃ 04.03.2016 ರಿಂದ ದಿನಾಂಕಃ 20.05.2020 ರವರೆಗೆ ಹಾವೇರಿ ಶಹರ ಪೊಲೀಸ ಠಾಣೆಯಲ್ಲಿ ಎ.ಎಸ್.ಐ ಆಗಿ ಸೇವೆ ಸಲ್ಲಿಸಿದ್ದೇನೆ. ದಿನಾಂಕಃ 01.09.2016 ರಂದು ಈ ಪ್ರಕರಣದ ಕಡತವನ್ನು ಚಾ.ಸಾ-10 ಇವರಿಂದ ಸ್ವೀಕರಿಸಿ ಅದೇ ದಿವಸ ಮುಂದಿನ ತನಿಖೆಯನ್ನು ಮುಂದುವರೆಯಿಸಿ ದಿನಾಂಕಃ 04.09.2016 ರಂದು ಈ ಪ್ರಕರಣದಲ್ಲಿಯ ಆರೋಪಿಗಳಿಗೆ ನೋಟಿಸನ್ನು ಕೊಟ್ಟಿದ್ದೇನೆ. ಅದೇ ರೀತಿ ಇಬ್ಬರೂ ಆರೋಪಿಗಳು ದಿನಾಂಕಃ 09.09.2016 ರಂದು 1 ನೇ ಆರೋಪಿಯು ನಾನು ಕೊಟ್ಟಂತಹ ನೋಟಿಸಿಗೆ ಉತ್ತರವನ್ನು ಕೊಟ್ಟಿದ್ದಾನೆ.

2) ಆ ರೀತಿ 1 ನೇ ಆರೋಪಿಯು ಆತನ ಬಳಿ ಇದ್ದಂತಹ ಮೂಲ ದಾನಪತ್ರವು ಕಳೆದು ಹೋಗಿರುತ್ತದೆ, ಆದ್ದರಿಂದ ಅದನ್ನು ಹಾಜರುಪಡಿಸಲು ಆಗುವದಿಲ್ಲ ಎಂದು ಹೇಳಿದಾಗ ನಾನು ಪುನಃ ಇಬ್ಬರೂ ಆರೋಪಿಗಳಿಗೆ ನೋಟಿಸನ್ನು ಕೊಟ್ಟಿದ್ದೇನೆ. ಅದೇ ರೀತಿ ಇದೇ ನ್ಯಾಯಾಲಯದಲ್ಲಿ

ಇರುವಂತಹ ಸಿವಿಲ್ ಪ್ರಕರಣದಲ್ಲಿ ಮೂಲದಾನಪತ್ರವನ್ನು ಹಾಜರುಪಡಿಸಿದ್ದೇನೆ ಎಂದು ಹೇಳಿದ್ದರಿಂದ ನಾನು ನ್ಯಾಯಾಲಯಕ್ಕೆ ಮೂಲದಾನ ಪತ್ರವನ್ನು ಪೂರೈಸಲು ಮನವಿ ಪತ್ರವನ್ನು ಕಳುಹಿಸಿಕೊಡುತ್ತೇನೆ ಮತ್ತು ನ್ಯಾಯಾಲಯವು ಸಹ ಮೂಲ ದಾನಪತ್ರವನ್ನು ನಮ್ಮ ಠಾಣೆಗೆ ಕಳುಹಿಸಿಕೊಟ್ಟಿರುವದಿಲ್ಲ. ಆ ನಂತರ ಈ ಪ್ರಕರಣದಲ್ಲಿ ದಾಖಲಾತಿಗಳನ್ನು ಪರಿಶೀಲಿಸಿ ಆರೋಪಿಗಳ ವಿರುದ್ದ ಸಾಕಷ್ಟು ಆರೋಪಗಳು ಕಂಡು ಬಂದಿದ್ದರಿಂದ ಆರೋಪಿಗಳ ವಿರುದ್ದ ದೋಷಾರೋಪಣ ಪತ್ರ ಸಲ್ಲಿಸಿದ್ದೇನೆ. ನಾನು ದೋಷಾರೋಪಣ ಪತ್ರವನ್ನು ಆರೋಪಿಗಳು ಉದ್ದೇಶಪೂರ್ವಕವಾಗಿ ತಮ್ಮ ಬಳಿ ಇದ್ದಂತಹ ದಾನ ಪತ್ರವನ್ನು ನಾಶಪಡಿಸಿರುತ್ತಾರೆ ಎಂದು ಸುಳ್ಳು ಮಾಹಿತಿ ಕೊಟ್ಟಿದ್ದರಿಂದ ಆರೋಪಿತರಿಬ್ಬರೂ ಪೊಲೀಸರಿಗೆ ಮೋಸ ಮಾಡಿದ್ದರಿಂದ ಭಾ.ದಂ.ಸ ಕಲಂ.201 ರಡಿಯಲ್ಲಿ ಸೇರಿಸಿ ಅಂತಿಮ ವರದಿ ಸಲ್ಲಿಸಿದ್ದೇನೆ.

3) ನಂತರ ನಾನು ಅಂತಿಮ ವರದಿಯಲ್ಲಿ ಒಂದು ವೇಳೆ ಮೂಲ ದಾನಪತ್ರ ಸಿಕ್ಕರೆ ಅದನ್ನು ಎಫ್.ಎಸ್.ಎಲ್ ವರದಿಗಾಗಿ ಕಳುಹಿಸಿಕೊಡುತ್ತೇನೆ ಎಂದು ನನ್ನ ಅಂತಿಮ ವರದಿಯಲ್ಲಿ ಕಾಣಿಸಿರುತ್ತೇನೆ. ನಾನು ಆರೋಪಿಗಳಿಗೆ ಕಳುಹಿಸಿದ 5 ನೋಟಿಸಗಳನ್ನು ಕ್ರಮವಾಗಿ ನಿ.ಪಿ-14 ರಿಂದ ನಿ.ಪಿ-18 ಎಂದು ಗುರುತಿಸಲಾಯಿತು. ಸಾಕ್ಷಿಯ ಸಹಿಯನ್ನು ನಿ.ಪಿ-14(ಎ) ಇಂದ ನಿ.ಪಿ-18(ಎ) ಎಂದು ಗುರುತಿಸಲಾಯಿತು . 1ನೇ ಆರೋಪಿಯು ಕೊಟ್ಟಂತಹ ಎರಡು ನೋಟಿಸಿಗೆ ಉತ್ತರಗಳನ್ನು ನಿ.ಪಿ-19 ಮತ್ತು ನಿ.ಪಿ-20 ಎಂದು ಗುರುತಿಸಲಾಯಿತು. 2ನೇ ಆರೋಪಿ ಕೊಟ್ಟಂತಹ ನೋಟಿಸಿನ ಉತ್ತರವನ್ನು ನಿ.ಪಿ-21 ಎಂದು ಗುರುತಿಸಲಾಯಿತು. ನ್ಯಾಯಾಲಯಕ್ಕೆ ಸಲ್ಲಿಸಿದ ಮನವಿ ಪತ್ರವನ್ನು ನಿ.ಪಿ-22 ಎಂದು, ಸಾಕ್ಷಿಯ ಸಹಿಯನ್ನು ನಿ.ಪಿ-

22(ಎ) ಎಂದು ಗುರುತಿಸಲಾಯಿತು. ಉತ್ತರವನ್ನು ನಿ.ಪಿ-23 ಎಂದು, ಸಾಕ್ಷಿಯ ಸಹಿಯನ್ನು ನಿ.ಪಿ-23(ಎ) ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ ಶ್ರೀ.ಎಸ್.ಕೆ.ವಾಯ್ ವಕೀಲರಿಂದಃ ಆರೋಪಿತರ ಪರವಾಗಿಃ**

4) ನಾನು ಈ ಪ್ರಕರಣದಲ್ಲಿ ಆರೋಪಿಗಳಿಗೆ ಯಾವುದೇ ನೋಟಿಸನ್ನು ಕೊಟ್ಟಿಲ್ಲ ಅಂದರೆ ಸರಿಯಲ್ಲ ಮತ್ತು ನ್ಯಾಯಾಲಯಕ್ಕೆ ಮನವಿ ಪತ್ರ ಕೊಟ್ಟಿಲ್ಲ ಅಂದರೆ ಸರಿಯಲ್ಲ ಮತ್ತು ಆರೋಪಿಗಳು ಸಹ ನ್ಯಾಯಾಲಯಕ್ಕೆ ನೋಟಿಸ ಕೊಟ್ಟಿಲ್ಲ ಅಂದರೆ ಸರಿಯಲ್ಲ. ನಾನು ಆರೋಪಿಗಳ ವಿರುದ್ಧ ಸುಳ್ಳು ದೋಷಾರೋಪಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲಾ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ನ. ಸ. ಓ. ಹೇ. ಕೇ. ಸರಿ ಇದೆ.
ಎಂದು ಒಪ್ಪಿರುತ್ತಾರೆ.

ಮುಖ್ಯ ನ್ಯಾಯಿಕ ದಂಡಾಧಿಕಾರಿಗಳು
ಹಾವೇರಿ.